2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ 62/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಯತೀಶ್ | ಪಿಡಬ್ಲೂ - 08 |
| ತಂದೆಯ ಹೆಸರು | - | ರುದ್ರಪ್ಪ | ಸಿಡಬ್ಲೂ - 9 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಹುಲಿ ತಿಮ್ಮಾಪುರ | |

ದಿನಾಂಕಃ 27-06-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:-

1. ಈ ಪ್ರಕರಣದ ಯಾವುದೇ ಆರೋಪಿತರು ಮತ್ತು ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತಿಲ್ಲ. ಕೆ ಎ 14 7937 ನೋಂದಣಿ ಸಂಖ್ಯೆಯುಳ್ಳ ಲಾರಿಯನ್ನು ನಾನು ನೋಡಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 12.10.2006 ರಂದು ಪೊಲೀಸರು ನನ್ನನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ದಿನಾಂಕಃ 04.10.2006 ರಂದು ಸಂಜೆ ನಾನು ಲಿಂಗದಹಳ್ಳಿಗೆ

ಬಂದಿದ್ದೆನು ಎಂದರೆ ಸರಿಯಲ್ಲ. ನಂತರ ಕೆಲಸ ಮುಗಿಸಿಕೊಂಡು ನನ್ನ ಸಂಬಂಧಿಕರ ಮನೆಯಲ್ಲಿ ಇದ್ದ ಇಬ್ಬರು ಹುಡುಗರನ್ನು ಕರೆದುಕೊಂಡು ರಾತ್ರಿ 11.00 ರಿಂದ 11.30 ಗಂಟೆಗೆ ವಾಪಾಸ್ಸು ನಮ್ಮ ಊರಿಗೆ ಹೊರಟೆನು ಎಂದರೆ ಸರಿಯಲ್ಲ. ಲಿಂಗದಹಳ್ಳಿಯ ಊರಿನ ಹೊರಗೆ ಇರುವ ನಮ್ಮ ಊರಿಗೆ ತಿರುಗುವ ಕ್ರಾಸಿನ ಬಳಿ ಹೋಗುತ್ತಿದ್ದಾಗ ತರೀಕೆರೆ ಕಡೆಯಿಂದ ಕಮಾನಿನ ಲಾರಿ ಬಂದು ಊರಿನ ಕಡೆ ತಿರುಗಿ ನಿಂತಿತ್ತು ಎಂದರೆ ಸರಿಯಲ್ಲ. ಲೈಟ್ ಕಂಬದ ಬಳಿ ಲಾರಿಯಲ್ಲಿ ಇದ್ದ ಮೂರು ಜನ ಇಳಿದಿದ್ದು ಲಾರಿಯ ಒಳಗೆ ಇನ್ನೂ 3-4 ಜನ ಇದ್ದರು ಎಂದರೆ ಸರಿಯಲ್ಲ. ಸದರಿ ಲಾರಿ ನಮ್ಮ ಊರಿಗೆ ಹೋಗುವುದೆನೋ ಎಂದು ನಾನು ಲಾರಿ ಚಾಲಕನ ಬಳಿ ವಿಚಾರಿಸಿದೆನು ಎಂದರೆ ಸರಿಯಲ್ಲ. ಸದರಿ ಲಾರಿಯ ಸಂಖ್ಯೆ 407 ಅಥವಾ 409 ಆಗಿತ್ತು, ಅದು ಹಸಿರು ಬಣ್ಣದಾಗಿತ್ತು ಮತ್ತು ಲಾರಿಯ ಹಿಂಬದಿ ಇದ್ದ ನಂಬರ್ ಪ್ಲೇಟ್ ನ್ನು ನೋಡಿ ಅದರ ಕೊನೆಯ ಅಕ್ಷರಗಳು 37 ಎಂದು ನೆನಪಿಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಲಾರಿ ಮುಂದೆ ಹೋಗಿ ಹಳ್ಳದ ಸೇತುವೆಯ ಬಳಿ ನಿಂತಿತ್ತು ಎಂದರೆ ಸರಿಯಲ್ಲ. ಸರ್ಕಲ್ ಬಳಿ ಮೂರು ಜನ ಸದರಿ ಲಾರಿಯಿಂದ ಇಳಿದು ನಮ್ಮ ಹಿಂದೆ ಬಂದರು ಎಂದರೆ ಸರಿಯಲ್ಲ. ನಂತರ ಸದರಿ ಮೂರು ಜನರು ನಂಜುಂಡಪ್ಪನ ಜಮೀನಿನ ಗೇಟ್ ನ್ನು ತೆಗೆದು ಜಮೀನಿನ ಒಳಗಡೆ ಹೋದರು ಎಂದರೆ ಸರಿಯಲ್ಲ. ಸದರಿ ಲಾರಿಯಲ್ಲಿ ಬಂದಿದ್ದ ವ್ಯಕ್ತಿಗಳು ವಿದ್ಯುತ್ ವೈರ್ ಗಳನ್ನು ಕಳ್ಳತನ

ಮಾಡಿಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಲಾರಿಯಿಂದ ಕೆಳಗೆ ಇಳಿದಿದ್ದ ಮೂರು ಜನರನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಆ ವಿಷಯಗಳನ್ನು ಕುರಿತು ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.12 ಎಂದು ಗುರುತಿಸಲಾಯಿತು. ದಿನಾಂಕಃ 01.12.2006 ರಂದು ಈ ಪ್ರಕರಣದಲ್ಲಿ ವಿದ್ಯುತ್ ವೈರ್ ನ್ನು ಕಳ್ಳತನ ಮಾಡಿದ್ದ ಆರೋಪಿಗಳ ಪೈಕಿ ಮಂಜ, ಲೋಕೇಶ್ ಮತ್ತು ರಮೇಶ್ ನನ್ನು ಪೊಲೀಸರು ಬಂಧಿಸಿರುವುದಾಗಿ ತಿಳಿಸಿ, ನನ್ನನ್ನು ಠಾಣೆಗೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಆಗ ನಾನು ಸದರಿ ಆರೋಪಿತರನ್ನು ನೋಡಿ ಗುರುತಿಸಿ ಘಟನೆಯ ದಿನ ಲಾರಿಯಿಂದ ಇಳಿದಿದ್ದ ವ್ಯಕ್ತಿಗಳು ಅವರೇ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಠಾಣಾ ಆವರಣದಲ್ಲಿ ನಿಲ್ಲಿಸಲಾಗಿದ್ದ ಕೆ ಎ 14 7937 ನೋಂದಣಿ ಸಂಖ್ಯೆಯುಳ್ಳ ಲಾರಿಯನ್ನು ನೋಡಿ ಘಟನೆಯ ದಿನ ನೋಡಿದ ಲಾರಿ ಅದೇ ಎಂದು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ವಿಚಾರ ತಿಳಿಯಲಾಗಿ ಸದರಿ ಮೂರು ಜನ ಆರೋಪಿತರು ಮತ್ತು ಇತರೆ ಐದು ಜನ ಆರೋಪಿತರೊಂದಿಗೆ ಸೇರಿಕೊಂಡು ಕೆ ಇ ಬಿ ಆವರಣದಲ್ಲಿದ್ದ ಅಲ್ಯುಮಿನಿಯಂ ವೈರ್ ನ್ನು ಕಳ್ಳತನ ಮಾಡಿಕೊಂಡು ಅವುಗಳನ್ನು ಬೆಂಗಳೂರಿನಲ್ಲಿ ಮಾರಾಟ ಮಾಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ವಿಚಾರಗಳನ್ನು ತಿಳಿಸಿ ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಸದರಿ ಮುಂದುವರೆದ ಹೇಳಿಕೆಯನ್ನು ನಿಪಿ.13 ಎಂದು ಗುರುತಿಸಲಾಯಿತು.

3. ಘಟನೆಯ ಬಗ್ಗೆ ಮಾಹಿತಿ ಇದ್ದು ಆ ಬಗ್ಗೆ ನಾನು ನಿ.ಪಿ.12 ಮತ್ತು 13 ರಂತೆ ಪೊಲೀಸರಿಗೆ ಹೇಳಿಕೆಗಳನ್ನು ನೀಡಿದ್ದರೂ ಸಹ ಆರೋಪಿಯೊಂದಿಗೆ ಶಾಮೀಲಾಗಿ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.